ಸಾಕ್ಷಿ ಯನ್ನು ದಿಃ 21.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ಸುಬ್ರಮಣ್ಯ ಸೊಸೈಟಿಯ ಪೂರ್ಣ ವಿಳಾಸ ನನಗೆ ಗೊತ್ತಿಲ್ಲ.
2. ಶ್ರೀಮತಿ ಸಿ ರವರಿಂದ ನಾನು ಹಣವನ್ನು ಪಡೆದುಕೊಂಡು ಆರೋಪಿತ ಚೆಕ್ ನ್ನು ಅವರಿಗೆ ಸೆಕ್ಯೂರಿಟಿಯಾಗಿ ನೀಡಿರುವುದಕ್ಕೆ ಯಾವುದೇ ದಾಖಲೆಗಳು ಇಲ್ಲ.
3. ಪಾರ್ಟರಶೀಪ ಪರ್ಮ ಡಿಸಾಲ್ವ ಆದಾಗ ಚೆಕ್ ನ್ನು ಭದ್ರತೆಗಾಗಿ ನೀಡಿರುವ ಬಗ್ಗೆ ಸದರಿ ರೀವೊಲೂಷನ ಪತ್ರದಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎಂದು ನುಡಿಯುತ್ತಾರೇ
4. ಬ್ಯಾಂಕ್ ಖಾತೆಯನ್ನು ಮುಚ್ಚುವಾಗ, ನೀವು ಆರೋಪಿತ ಚೆಕ್ ಬಗ್ಗೆ ಬ್ಯಾಂಕ್ ನವರಿಗೆ ತಿಳಿಸಿದ್ದೀರಾ ಎಂದರೆ ತಿಳಿಸಿಲ್ಲ.
5. ನಿಪಿ.1 ರ ಚೆಕ್ ನಗದೀಕರಿಸಲು ಹಾಜರು ಪಡಿಸಿದರೆ ಆ ಬಗ್ಗೆ ನಮಗೆ ಮಾಹಿತಿಯನ್ನು ನೀಡಿ ಎಂದು ಬ್ಯಾಂಕ ಗೆ ಅರ್ಜಿಯನ್ನು ನೀಡಿದ್ದೀರಾ ಎಂದರೆ ನೆನಪಿಲ್ಲ.
6. ಸೊಸೈಟಿಯಲ್ಲಿ ಸಾಲ ಮಾಡುವಾಗ ಶ್ರೀಮತಿ ಸಿ., ರವರಿಗೆ ಸಾಲವನ್ನು ಹಿಂದಿರುಗಿಸಬೇಕು ಎಂಬ ವಿಷಯವನ್ನು ನಮೂದು ಮಾಡಿಲ್ಲ. ಆದರೆ ಮೌಖಿಕವಾಗಿ ತಿಳಿಸಿರುತ್ತೇನೆ.
7. ನಾನು ಸಹಿಯನ್ನು ಒಂದೇ ರೀತಿಯಲ್ಲಿ ಮಾಡುತ್ತೇನೆ.
8. ನಿಡಿ.1 ರನ್ನು ಸಾಕ್ಷಿಗೆ ತೋರಿಸಿಲಾಗಿ, ಅದರಲ್ಲಿರುವ ಸಹಿ ನನ್ನದೇ ಇರಬಹುದು ಎಂದು ನುಡಿಯುತ್ತಾರೆ.
9. ಶ್ರೀಮತಿ ಸಿ., ಮತ್ತು ವೆಂಕಟೇಶ ರವರು ಸುರತ್ಕಲ ಪೊಲೀಸ ಠಾಣೆಯಲ್ಲಿ ನಿಪಿ.1 ರ ಚೆಕ್ ಸಂಬಂಧಪಟ್ಟಂತೆ ನೀಡಿದ ಹೇಳಿಕೆಯನ್ನು ಈ ನ್ಯಾಯಾಲಯದಲ್ಲಿ ನೀಡಲು ನಿಮಗೆ ತೊಂದರೆ ಇತ್ತಾ ಎಂದರೆ, ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯತ್ತಾರೆ. ನೀವು ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸದೇ ಇದ್ದವು, ನನಗೆ ನೆನಪಿಲ್ಲ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

10. ನಿಡಿ.3 ರ ಅರ್ಜಿಯನ್ನು ಬ್ಯಾಂಕ್ ಗೆ ಕೊಡಬೇಕಾದರೆ ನಾನು ಒಬ್ಬನೇ ಸಹಿಯನ್ನು ಮಾಡಿರುತ್ತೇನೆ.

11. ನೀವು ಪಿರ್ಯಾದುದಾರರಿಂದ ರೂ. 15 ಲಕ್ಷ ರೂ. ಗಳನ್ನು ಪಡೆದು ಕೊಂಡು ನಿಪಿ.1 ರ ಚೆಕ್ ನ್ನು ಪಡೆದುಕೊಂಡಿದ್ದೀರಾ ಎಂದರೆ, ಸಾಕ್ಷಿಯು ನನಗೆ ಹಾಗೂ ಪಿರ್ಯಾದುದಾರರಿಗೆ ಪರಿಚಯವಿಲ್ಲ ಎಂದು ನುಡಿಯುತ್ತಾರೆ.

12. ಜಂಟಿ ಖಾತೆಯ ಮಾಹಿತಿಯನ್ನು ಪಡೆಯಲು ನೀವು ಹಾಗೂ ನಿಮ್ಮ ತಮ್ಮ ಸಹಿಯನ್ನು ಮಾಡಿ, ಅರ್ಜಿಯನ್ನು ಕೊಟಿದ್ದೀರಾ ಎಂದರೆ, ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

13. ನೀವು ಪಿರ್ಯಾದುದರರಿಗೆ ನೀಡಿದ ಚೆಕ್ ಅಮಾನ್ಯಗೊಂಡು, ನಂತರ ವಕೀಲರಿಂದ ದಿಃ 23.08.2024 ರಂದು ನಿಮಗೆ ನೋಟಿಸ್ ನ್ನು ನೀಡಿದ್ದರು ಎಂದರೆ ಸರಿ. ದಿಃ 26.08.2024 ರಂದು ನಿಮಗೆ ಜಾರಿಯಾಗಿದ್ದರು ಸಹ ನೀವು ಅದಕ್ಕೆ ಪ್ರತ್ಯುತ್ತರವನ್ನು ನೀಡಿಲ್ಲ, ಆದರೆ ನಾನು ಪೊಲೀಸ ಠಾಣೆಯಲ್ಲಿ 29.08.2024 ರಂದು ದೂರನ್ನು ನೀಡಿದ್ದೇನೆ.

14. ದಿಃ 29.08.2024 ರಂದು ನೀವು ಠಾಣೆಯಲ್ಲಿ ದೂರನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ.

15.ಶ್ರೀಮತಿ ಸಿ., ಮತ್ತು ವೆಂಕಟೇಶ ರವರು ಯಾವಾಗ ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದಾರೆ ಎಂದು ನನಗೆ ನೆನಪಿಲ್ಲ.

16. ನಾನು ಮಂಗಳೂರು ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿದ ದಿನಾಂಕ ನನಗೆ ನೆನಪಿಲ್ಲ.

17. ನಿಮಗೆ ನೋಟಿಸ್ ಜಾರಿಯಾಗಿ 8 ತಿಂಗಳ ನೀವು ಖಾಸಗಿ ದೂರನ್ನು ಸಲ್ಲಿಸಿದ್ದೀರಾ ಎಂದರೆ, ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ.

18. ನೀವು ಹಾಗೂ ಶ್ರೀಮತಿ ಸಿ., ರವರು ಅನ್ಯೋನ್ಯವಾಗಿದ್ದೀರಾ ಎಂದರೆ, ವ್ಯವಹಾರ ಮುಗಿದ ನಂತರ ಮಾತು ಕತೆ ಇಲ್ಲ ಎಂದು ನುಡಿಯುತ್ತಾರೆ. ತಮ್ಮಗಳ ಮಧ್ಯ ಯಾವುದೇ ಜಗಳ ಆಗಿಲ್ಲ ಎಂದರೆ ಸರಿ.

19. ನೀವು ಪಿರ್ಯಾದುದಾರರಿಗೆ ಹಣವನ್ನು ನೀಡಬೇಕಾಗುತ್ತದೆ ಎಂದು ಶ್ರೀಮತಿ ಸಿ., ರವರಿಗೆ ಚೆಕ್ ನ್ನು ಭದ್ರತೆಗಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ.

20.ಶ್ರೀಮತಿ ಸಿ,, ರವರಿಗೆ ನೀವು ಪಡೆದು ಸಾಲಕ್ಕೆ ನೀಡಿದ ನಿಪಿ.1 ಚೆಕ್ ಅಲ್ಲ, ನೀವು ದೂರುದಾರರಿಗೆ ನೀಡಿದ ಚೆಕ್ ಎಂದರೆ ಸರಿಯಲ್ಲ.

21.ನೀವು ಶ್ರೀಮತಿ ಸಿ., ಮತ್ತು ವೆಂಕಟೇಶ್ ರವರು ಸುರತ್ಕಲ ಪೊಲೀಸ ಠಾಣೆಯಲ್ಲಿ ನೀಡಿದ ಹೇಳಿಕೆಯನ್ನು ಈ ನ್ಯಾಯಾಲಯಕ್ಕೆ ನಿಜಾಂಶ ತಿಳಿಯುತ್ತದೆ ಎಂದು ನೀವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದಂರೆ ಸರಿಯಲ್ಲ.

22.ದೂರುದಾರರಿಗೆ ಮೋಸ ಮಾಡುವ ಸಲುವಾಗಿ ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ,

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ